## ನಿಮ್ಮೊಡನೆ

# ಸರ್ಕಾರಿ ಶಾಲೆಗಳ ಸಬಲೀಕರಣ

ರಾಜ್ಯದಲ್ಲಿ ಕ್ಷೀಣಿಸುತ್ತಿರುವ ಕನ್ನಡದ ಪ್ರಭಾವವನ್ನು ಮರಳಿ ಗಳಿಸುವ ನಿಟ್ಟಿನಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ. ಸಾಹಿತಿ ಎಸ್.ಜಿ.ಸಿದ್ಧರಾಮಯ್ಯನವರ ನೇತೃತ್ವದ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಇತ್ತೀಚೆಗೆ ಸಲ್ಲಿಸಿರುವ ಶಿಫಾರಸುಗಳ ಪಟ್ಟಿಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ. ಈ ಪಟ್ಟಿಯಲ್ಲಿರುವ ಮೂರು ಶಿಫಾರಸ್ಸುಗಳಂತೂ ಹೆಚ್ಚು ಮಹತ್ವದ್ದು. ಸರ್ಕಾರಿ ನೌಕರರು/ ಅಧಿಕಾರಿಗಳು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೇ ಸೇರಿಸುವಂತೆ ಕಾನೂನು ಮಾಡುವುದು; ಆರ್‌ಟಿಇ ಕಾಯ್ದೆಯನ್ವಯ ಬಡವರ ಮಕ್ಕಳನ್ನು ಸೇರಿಸಿಕೊಳ್ಳಲು ಸರ್ಕಾರವು ಖಾಸಗಿ ಶಾಲೆಗಳಿಗೆ ಹಣ ನೀಡುವ ಬದಲು, ಅದನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೇ ಬಳಸುವುದು ಮತ್ತು ಶಾಲಾ ಶಿಕ್ಷಕರಿಗೆ ಪಾಠ ಮಾಡುವ ಕೆಲಸ ಬಿಟ್ಟು ಬೇರೆ ಯಾವ ಕೆಲಸವನ್ನೂ ವಹಿಸಬಾರದು– ಎನ್ನುವ ಶಿಫಾರಸ್ಸುಗಳ ಬಗ್ಗೆ ದೊಡ್ಡ ಮಟ್ಟದ ಚರ್ಚೆ ನಡೆಯಬೇಕಾದ ಅಗತ್ಯವಿದೆ. ಚರ್ಚೆಯ ಮೂಲಕ ಈ ಶಿಫಾರಸ್ಸುಗಳನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು, ಸರ್ಕಾರಕ್ಕೆ ಒತ್ತಡ ಹೇರಬೇಕಾದ ಕೆಲಸವನ್ನೂ ಕನ್ನಡಪರ ಸಂಘ– ಸಂಸ್ಥೆಗಳು, ಹೋರಾಟಗಾರರು ಮಾಡಬೇಕಿದೆ.

ಕಳೆದ ಹಲವು ವರ್ಷಗಳಿಂದ ಖಾಸಗಿ ಶಾಲೆಗಳು ದುಬಾರಿ ಶುಲ್ಕ ಮತ್ತು ಅನಧಿಕೃತ ಬಿಲ್ಡಿಂಗ್ ಫಂಡ್‌ಗಳ ಮೂಲಕ ಬಡವರ ಮಕ್ಕಳು ತಮ್ಮ ಹತ್ತಿರಕ್ಕೇ ಸುಳಿಯದಂತೆ ನೋಡಿಕೊಂಡಿವೆ. ಉಳ್ಳವರಿಗೆ ಖಾಸಗಿ ಶಾಲೆ ಮತ್ತು ಬಡವರಿಗೆ ಸರ್ಕಾರಿ ಶಾಲೆ ಎನ್ನುವ ದೊಡ್ಡ ಕಂದರ ನಿರ್ಮಾಣವಾಗಿದೆ. ಆರ್‌ಟಿಇ ಕಾಯ್ದೆಯ ಮೂಲಕ ಈ ಕಂದರವನ್ನು ತುಂಬುವ ಸರ್ಕಾರದ ಪ್ರಯತ್ನ ಪ್ರಾಮಾಣಿಕವಾದುದೇ ಆಗಿತ್ತು. ತನ್ನ ಸುತ್ತಮುತ್ತಲ ಅರ್ಹ ಬಡ ಮಕ್ಕಳಿಗೆ ಶೇಕಡಾ 25ರಷ್ಟು ಸೀಟುಗಳನ್ನು ಖಾಸಗಿ ಶಾಲೆಗಳು ಕಡ್ಡಾಯವಾಗಿ ನೀಡಬೇಕಾದ ಕಾಯ್ದೆ ತಿದ್ದುಪಡಿ, ಶಿಕ್ಷಣ ಕ್ಷೇತ್ರದ ತಾರತಮ್ಯವನ್ನು ನೀಗುವ ನಿಟ್ಟಿನಲ್ಲಿ ಮಹತ್ವದ್ದೇ. ಈ ಬಡ ವಿದ್ಯಾರ್ಥಿಗಳ ಶುಲ್ಕವನ್ನು ತುಂಬಲು ಸರ್ಕಾರವು ಮೊದಲ ವರ್ಷವೇ ಸುಮಾರು 380 ಕೋಟಿ ರೂಪಾಯಿ ಖರ್ಚು ಮಾಡಿತ್ತು. ‘ಪ್ರತಿ ವರ್ಷವೂ ಸರ್ಕಾರ ತುಂಬಬೇಕಾದ ಈ ಹಣ ದುಪ್ಪಟ್ಟಾಗುತ್ತಾ ಹೋಗುತ್ತದೆ. ಪ್ರಾಥಮಿಕ ಶಿಕ್ಷಣದ ನಿಧಿಯಿಂದ ಇಷ್ಟೊಂದು ಅಪಾರ ಹಣವನ್ನು ಖಾಸಗಿ ಶಾಲೆಗಳಿಗೆ ನೀಡುವ ಬದಲು ಸರ್ಕಾರಿ ಶಾಲೆಗಳಿಗೇ ಈ ಹಣವನ್ನು ನೇರವಾಗಿ ಖರ್ಚು ಮಾಡಿ ಆ ಶಾಲೆಗಳನ್ನು ಅಭಿವೃದ್ಧಿ ಪಡಿಸುವುದು ಒಳ್ಳೆಯದು’ ಎನ್ನುವುದು ಪ್ರಾಧಿಕಾರದ ಶಿಫಾರಸ್ಸು.

ಪ್ರಾಧಿಕಾರದ ಈ ಸಲಹೆ ಸಮಯೋಚಿತ. ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಷ್ಟೇ ಅತ್ಯುತ್ತಮ ಕಟ್ಟಡ, ಲ್ಯಾಬ್, ಲೈಬ್ರರಿ, ಶಿಕ್ಷಕ ವೃಂದ ಮತ್ತಿತರ ಸೌಲಭ್ಯಗಳನ್ನು ಹೊಂದಿದ್ದರೆ, ಯಾವ ಪೋಷಕರೂ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವುದಿಲ್ಲ.

ಪ್ರಾಧಿಕಾರದ ಈ ಸಲಹೆ ಸಮಯೋಚಿತ. ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಷ್ಟೇ ಅತ್ಯುತ್ತಮ ಕಟ್ಟಡ, ಲ್ಯಾಬ್, ಲೈಬ್ರರಿ, ಶಿಕ್ಷಕ ವೃಂದ ಮತ್ತಿತರ ಸೌಲಭ್ಯಗಳನ್ನು ಹೊಂದಿದ್ದರೆ, ಯಾವ ಪೋಷಕರೂ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವುದಿಲ್ಲ. ರಾಜ್ಯದಲ್ಲಿ ಕೈಬೆರಳೆಣಿಕೆಯ ಸರ್ಕಾರಿ ಶಾಲೆಗಳು ಹೀಗೆ ಅಭಿವೃದ್ಧಿ ಹೊಂದಿ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆದಿರುವ ಉದಾಹರಣೆಗಳಿವೆ. ಅದೂ ಅಲ್ಲದೆ, ಆರ್‌ಟಿಇ ಕಾಯ್ದೆಯಡಿ ಖಾಸಗಿ ಶಾಲೆಗಳಲ್ಲಿ ಈಗ ಸೀಟು ಪಡೆಯುತ್ತಿರುವ ಮಕ್ಕಳ ಪಟ್ಟಿಯನ್ನು ಗಮನಿಸಿದರೆ, ಹಲವೆಡೆ ನಿಜಕ್ಕೂ ಅರ್ಹ ಬಡವರ ಮಕ್ಕಳು ಸೀಟುವಂಚಿತರಾಗಿರುವುದು ಎದ್ದು ಕಾಣುತ್ತಿದೆ. ಶಿಕ್ಷಣಾಧಿಕಾರಿಗಳ ಅಪ್ರಾಮಾಣಿಕತೆಯಿಂದ ಈ ವ್ಯವಸ್ಥೆ ಹಲವು ಖಾಸಗಿ ಶಾಲೆಗಳಿಗೆ ದುಡ್ಡು ಮಾಡುವ ದಂಧೆಯಾಗುತ್ತಿದೆ. ಬಡವರಲ್ಲದ ಎಷ್ಟೋ ಪೋಷಕರು ಬಿಇಓ, ಡಿಡಿಪಿಐಗಳ ಮತ್ತು ಖಾಸಗಿ ಶಾಲೆಗಳ ಆಡಳಿತದ ನೆರವಿನಿಂದ ಬಡವರ ಸೌಲಭ್ಯಗಳನ್ನು ಕಬಳಿಸುತ್ತಿರುವ ಪ್ರಕರಣಗಳು ಹೆಚ್ಚಾಗಿವೆ.

ಆದರೆ, ಸರ್ಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲೇ ಕಲಿಯಬೇಕು ಎನ್ನುವುದನ್ನು ಕಾನೂನುಬದ್ಧಗೊಳಿಸುವುದು ಪ್ರಾಯೋಗಿಕವಾಗಿ ಸಾಧ್ಯ ಆಗಬಹುದೆ? ಉತ್ತರ ಪ್ರದೇಶದಲ್ಲಿ ಹೈಕೋರ್ಟ್ ಈ ನಿಟ್ಟಿನಲ್ಲಿ ಒಲವು ತೋರಿದೆ ಎನ್ನಲಾಗುತ್ತಿದೆ. ಹಾಗಿದ್ದೂ ಇದರ ಕಾನೂನಾತ್ಮಕ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯವಿದೆ. ‘ಮಕ್ಕಳು ಯಾವ ಮಾಧ್ಯಮದಲ್ಲಿ ಕಲಿಯಬೇಕು ಎನ್ನುವುದನ್ನು ನಿರ್ಧರಿಸುವ ಹಕ್ಕು ಪೋಷಕರದ್ದು’ ಎಂದು ಈಗಾಗಲೆ ಸುಪ್ರೀಂಕೋರ್ಟ್ ತೀರ್ಪು ನೀಡಿದ್ದು ನಮ್ಮ ಕಣ್ಣಮುಂದಿದೆ. ಮಾಧ್ಯಮದ ಆಯ್ಕೆ ಬಗ್ಗೆಯೇ ಸರ್ಕಾರದ ನಿಲುವಿಗೆ ಕೋರ್ಟಿನ ಬೆಂಬಲ ಇಲ್ಲದಿರುವಾಗ, ಇನ್ನು ಶಾಲೆಯ ಆಯ್ಕೆಯ ಬಗ್ಗೆ ಬೆಂಬಲ ಸಿಕ್ಕೀತೆ? ಅದೇನೇ ಇರಲಿ, ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ ನೂರೆಂಟು ಕೆಲಸಗಳನ್ನು ಹಚ್ಚುವ ಬದಲು ಕೇವಲ ಪಾಠ ಮಾಡುವ ಕೆಲಸವನ್ನು ಅವರು ನಿಷ್ಠೆಯಿಂದ ಮಾಡುವಂತೆ ನೋಡಿಕೊಳ್ಳಬೇಕಾದ ಅಗತ್ಯದ ಬಗ್ಗೆ ಮಾತ್ರ ಎರಡು ಮಾತಿಲ್ಲ.

■ ಬಿ.ಎಂ.ಹನೀಫ್



ಈಶ್ವರ್